**ಸೋಮವಾರಪೇಟೆ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ**
**ಸಿಸಿ ನಂಃ 27/2024**

**ಪಿರ್ಯಾದಿಃ** ಉಪ ನಿರೀಕ್ಷಕರು. ಸೋಮವಾರಪೇಟೆ.

ಃ ವಿ ಃ

**ಆರೋಪಿ ಃ** ದಾಮೋದರ

**ದೋಷಾರೋಪಣೆ**

ಶ್ರೀ. ಕೆ.ಗೋಪಾಲಕೃಷ್ಣ, **ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ**

**ಆರೋಪಿಃ** ದಾಮೋದರ ಬಿನ್ ಲೇಟ್ ಚಂಗಪ್ಪ, 63 ವರ್ಷ, ಗರಗಂದೂರು ಬಿ ಗ್ರಾಮ, ಕುಂಬೂರು ಅಂಚೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

**ಈ ಕೆಳಗಿನಂತೆ ದೋಷಾರೋಪಣೆಯನ್ನು ಹೊರೆಸಿದ್ದೇನೆ.**

**ದಿಃ** 16-08-2023 ರಂದು ಅಬಕಾರಿ ವಿಚಕ್ಷಣ ದಳ, ಮಡಿಕೇರಿ ಇವರು ಗರಗಂದೂರು ವ್ಯಾಪ್ತಿಯಲ್ಲಿ ಸಂಜೆ 7.30 ರ ಸಮಯದಲ್ಲಿ ಗಸ್ತು ಕಾರ್ಯ ನಡೆಸುತ್ತಿರುವಾಗ ಆರೋಪಿಯ ಮನೆಯಲ್ಲಿ ಅಕ್ರಮವಾಗಿ ಮದ್ಯ ಶೇಖರಣೆ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಬಂದಿದ್ದು, ತಕ್ಷಣ ಸೋಮವಾರಪೇಟೆ ತಾಲ್ಲೂಕು, ಗರಗಂದೂರು ಗ್ರಾಮದಲ್ಲಿ ರಸ್ತೆ ಬಳಿ ಹೋಗುತ್ತಿದ್ದ ವ್ಯಕ್ತಿಯನ್ನು ಆರೋಪಿಯ ವಿಳಾಸ ಕೇಳಿ ತಿಳಿದುಕೊಂಡು ಆರೋಪಿಯ ಮನೆಯನ್ನು ಪರಿಶೀಲನೆ ಮಾಡಲಾಗಿ ಆರೋಪಿಯ ಮನೆಯಲ್ಲಿ 3 ಪ್ಲಾಸ್ಟಿಕ್ ಚೀಲಗಳಲ್ಲಿ ಮದ್ಯ ಇರವುದು ಕಂಡು ಬಂದಿರುತ್ತದೆ. ಅವುಗಳನ್ನು ಪರಿಶೀಲಿಸಿದಾಗ 1 ನೇ ಚೀಲವೂ ಬಿಳಿ

ಕಿತ್ತಲೆ ಹಾಗೂ ಹಸಿರು ಮಿಶ್ರಿತ ಪ್ಲಾಸ್ಟಿಕ್ ಚೀಲವಾಗಿದ್ದು ಅದರಲ್ಲಿ **180** ಮಿಲಿಯ **79** ಜಾನ್ ಒರಿಜಿನಲ್ ಚಾಯ್ಸ ಡಿಲಕ್ಸ್ ವಿ.ಎಸ್,ಒ.ಪಿ ಇಂಡಿಯನ್ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು. **2** ನೇ ಚೀಲ ಪರಿಶೀಲಿಸಲಾಗಿ ಬಿಳಿ ಮತ್ತು ಹಸಿರು ಮಿಶ್ರಿತ ಪ್ಲಾಸ್ಟಿಕ್ ಚೀಲವಾಗಿದ್ದು **90** ಮಿಲಿಯ **200** ಒರಿಜಿನಲ್ ಚಾಯ್ಸ್ ವಿ.ಎಸ್,ಒ.ಪಿ ಇಂಡಿಯನ್ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು. **3** ನೇ ಚೀಲದಲ್ಲಿ ಕೆಂಪು ಮತ್ತು ಹಸಿರು ಮಿಶ್ರಿತ ಪ್ಲಾಸ್ಟಿಕ್ ಚೀಲದಲ್ಲಿ **90** ಮಿಲಿಯ **165** ಜಾನ್ಸ್ ಒರಿಜಿನಲ್ ಚಾಯ್ಸ ವಿ.ಎಸ್,ಒ.ಪಿ ಇಂಡಿಯನ್ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ, **ನಿಮ್ಮ ಈ ಕ್ರಮ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ ಕಲಂ 14, 15, 32(1), 38(ಎ)** ಕೆ.ಈ ಆ್ಯಕ್ಟ್ **ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.**

**ಪ್ರ:1 ಈಗ ಓದಿ ವಿವರಿಸಿದ** ದೋಷರೋಪಣೆ **ತಿಳಿದಿದೆಯಾ?**
**ಉ:** ತಿಳಿದಿದೆ

**ಪ್ರ:2 ಮೇಲಿನ** ದೋಷರೋಪಣೆಯನ್ನು **ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?**
**ಉ:** ತಪ್ಪು ಮಾಡಿಲ್ಲ

**ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.**

-Sd/-

ದಿ: **19-10-2024** **ಪ್ರ ದ ನ್ಯಾ ದಂ, ಸೋಮವಾರಪೇಟೆ**